

# ಗೂಡು ನಿರ್ಮಾಣದ ನಿಪುಣ ಕಾಗದ ಕಣಜ

ಗೂಡು ಕಟ್ಟುವ ತಂತ್ರಗಾರಿಕೆಗೆ ಹೆಸರಾದ ಕಾಗದ ಕಣಜ ಜೇನುಹುಳಕ್ಕಿಂತ ಹೆಚ್ಚು ಅಪಾಯಕಾರಿಯೂ ಹೌದು.

■ ಜಿ.ಆರ್. ಪಂಡಿತ್

ಈಚೆಗೆ ಮಿತ್ರರೊಬ್ಬರ ಮನೆಯ ಹಿತ್ತಲಿನಲ್ಲಿ, ಅಡಿಕೆ ಮರಕ್ಕೆ ಹಬ್ಬಿದ ಕಾಳುಮೆಣಸಿನ ಬಳ್ಳಿಯ ಮಧ್ಯೆ ಗೂಡಿನಂತಹ ರಚನೆ ಕಣ್ಣಿಗೆ ಬಿತ್ತು. ನಾನು ಕೂಲಂಕಶವಾಗಿ ಪರಿಶೀಲಿಸಲು ಹತ್ತಿರ ಹೋಗುತ್ತಿದ್ದಂತೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾತ ತಡೆದ.

‘ಅದು ಕಡಜಿಗದ ಗೂಡು, ಅದರಲ್ಲಿರುವ ಕಡಜಿಗಗಳು ಗುಂಪಾಗಿ ಬಂದು ಕಚ್ಚಿದರೆ ನೀವು ಗೋವಿಂದ’ ಅನ್ನುತ್ತ ನಗೆ ಬೀರಿ, ಭಯ ಹುಟ್ಟಿಸಿದ. ಸ್ವಲ್ಪ ದೂರದಿಂದಲೇ ನೋಡಿದೆ. ಆ ಗೂಡಿನ ಬಾಗಿಲಿನಲ್ಲಿ ಜೇನ್ನೊಣಕ್ಕಿಂತ ದೊಡ್ಡದಾದ ಹುಳುಗಳು ಗೂಡಿನ ಒಳ ಹೋಗುವುದು, ಹೊರಬರುವುದು ನಡೆದೇ ಇತ್ತು.

ಕಡಜಿಗ, ಕಡಜ, ಕಡಿಜೀರಿಗೆ ಹುಳು, ಕಣಜ– ಹೀಗೆ ಅನೇಕ ಹೆಸರಿನಲ್ಲಿ ಗುರುತಿಸಲ್ಪಡುವ ಈ ಕೀಟ, ವೆಸ್ಪಿಡೆ ಕುಟುಂಬ ಮತ್ತು ಪೊಲಿಸ್ಟಿನೆ ಉಪಕುಟುಂಬಕ್ಕೆ ಸೇರಿದ ಕಾಗದ ಕಣಜ (paper Wasp). ತೆಳ್ಳಗಿನ ದೇಹ, ಉದ್ದ ಕಾಲುಗಳು, ಹಳದಿ, ಕಂದು ಮತ್ತು ಕಪ್ಪು ಮಿಶ್ರಿತ ಮೈ ಬಣ್ಣ, ಪಾರದರ್ಶಕ ಉದ್ದ ರೆಕ್ಕೆಗಳನ್ನು ಹೊಂದಿರುವ ಇದು ಗೂಡು ಕಟ್ಟುವ ತಂತ್ರಗಾರಿಕೆಗೆ ಹೆಸರುವಾಸಿ.

ಕಣಜಗಳು ಒಣಗಿದ ಮರ, ಕಾಂಡಗಳಿಂದ ನಾರುಗಳನ್ನು ಸಂಗ್ರಹಿಸಿ ಅವುಗಳನ್ನು ತಮ್ಮ ಲಾಲಾರಸದೊಂದಿಗೆ ಬೆರೆಸಿ ಮಾಡಿದ ಕಾಗದದಂಥ ವಸ್ತುವಿನಿಂದ, ಹಗುರವಾದ, ಆದರೆ ಬಾಳಿಕೆ ಬರುವಂತಹ ದೊಡ್ಡ ದೊಡ್ಡ ಗೂಡುಗಳನ್ನು ನಿರ್ಮಿಸುತ್ತವೆ. ಮರದ ಕೊಂಬೆಗಳಲ್ಲಿ, ಪೊದೆಗಳಲ್ಲಿ ಗೂಡು ಕಟ್ಟುತ್ತವೆ. ಗೂಡಿನ ಒಳಭಾಗ ಒಂದೇ ಪದರದಲ್ಲಿ ಜೋಡಿಸಲಾದ ಷಡ್ಭುಜೀಯ ಕೋಶಗಳ ಸರಣಿಯನ್ನೊಳಗೊಂಡಿರುತ್ತದೆ. ಇದರಲ್ಲಿ ಮರಿಗಳು ಬೆಳೆಯುತ್ತವೆ. ಕಾಗದ ಬಳಸಿ ಕಟ್ಟುವ ಗೂಡಿನಿಂದಾಗಿಯೇ ‘ಕಾಗದ ಕಣಜ’ ಎಂದು ಹೆಸರು ಬಂದಿದೆ. ಈ ಗೂಡುಗಳು ಚಳಿಗಾಲದಲ್ಲಿ ಸ್ವಾಭಾವಿಕವಾಗಿ ಹಾಳಾಗುತ್ತವೆ. ಆದ್ದರಿಂದ ಪ್ರತಿ ವಸಂತ ಕಾಲದಲ್ಲಿ ಹೊಸದಾಗಿ ಗೂಡು ನಿರ್ಮಿಸುತ್ತವೆ.

ಕಾಗದ ಕಣಜಗಳು ಶ್ರೇಣೀಕೃತ ಸಾಮಾಜಿಕ ರಚನೆ ಪ್ರದರ್ಶಿಸುತ್ತವೆ. ಪ್ರತಿ ಗೂಡು ಸಾಮಾನ್ಯವಾಗಿ ಪ್ರಬಲ ರಾಣಿ ಹುಳದ ನೇತೃತ್ವದಲ್ಲಿರುತ್ತವೆ. ರಾಣಿ ಹುಳಗಳು ಮೊಟ್ಟೆಗಳನ್ನು ಇಡುವ ಜವಾಬ್ದಾರಿ ಹೊಂದಿರುತ್ತವೆ. ಪ್ರತಿ ವಯಸ್ಕ ಹೆಣ್ಣು ಸ್ವತಂತ್ರವಾಗಿ ವಾಸಿಸುತ್ತದೆ. ಕೆಲಸಗಾರ ಕಣಜಗಳು ಆನುವಂಶಿಕವಾಗಿ ಹೆಣ್ಣು ಹುಳಗಳಾದರೂ ಅವು ಮೊಟ್ಟೆಗಳನ್ನು ಇಡಲಾರವು. ಅವು ಮೇವು, ಗೂಡು ನಿರ್ವಹಣೆ ಮತ್ತು ಲಾರ್ವಾಗಳ ಆರೈಕೆಯಲ್ಲಿ ಸಹಾಯ ಮಾಡುತ್ತವೆ. ಗಂಡು ಕಣಜ ಸಂಯೋಗದ ನಂತರ ಶೀಘ್ರದಲ್ಲೇ ಸಾಯುತ್ತದೆ.

ಕಾಗದ ಕಣಜಗಳು ಹೂವಿನ ಮಕರಂದ, ಹಣ್ಣುಗಳು ಮತ್ತಿತರ ಸಿಹಿ ಪದಾರ್ಥಗಳನ್ನು ತಿನ್ನುತ್ತವೆ. ಮರಿಹುಳಗಳು, ಜೇಡಗಳಂಥ ಕೀಟಗಳನ್ನೂ ತಿನ್ನುತ್ತವೆ. ಈ ಕಣಜಗಳು ಫೆರೋಮೋನ್‌ಗಳು ಮತ್ತು ದೃಶ್ಯ ಸಂಕೇತಗಳನ್ನು ಬಳಸಿ ಪರಸ್ಪರ ಸಂವಹನ ನಡೆಸುತ್ತವೆ. ಆ ಮೂಲಕ ತಮ್ಮ ಆಹಾರ ಮೂಲಗಳು, ಗೂಡಿನ ನಿರ್ವಹಣೆ ಮತ್ತು ತಮಗಿರುವ ಅಪಾಯದ ಮಾಹಿತಿ ಹಂಚಿಕೊಳ್ಳುತ್ತವೆ. ತಮ್ಮ ಇರುವಿಕೆಗೆ ಅಪಾಯ ಒದಗಿದಾಗ ಗೂಡುಗಳನ್ನು ಆಕ್ರಮಣಕಾರಿಯಾಗಿ ರಕ್ಷಿಸಿಕೊಳ್ಳುತ್ತವೆ. ಇವು ಜೇನುಹುಳಕ್ಕಿಂತ ಹೆಚ್ಚು ಅಪಾಯಕಾರಿ. ಹೆಚ್ಚು ನೋವುಂಟು ಮಾಡುತ್ತವೆಯಲ್ಲದೆ, ತುಂಬಾ ಹುಳಗಳು ಕಚ್ಚಿದರೆ ಸಾವೂ ಸಂಭವಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in